ಓ:ಎಸ್:ನಂ.288/2012

ಡಿ .ಡಬ್ಲ್ಯೂ- 1

ದಿನಾಂಕ: **02-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ವಾದಿ ಪರ ಶ್ರೀ ಟಿ ಎಲ್ ಪಿ **ವಕೀಲರಿಂದ**

ನಿಪಿ-23 ರಲ್ಲಿರುವ ದೃಡೀಕೃತ ಛಾಯಚಿತ್ರದಲ್ಲಿ ಇರುವ ವ್ಯಕ್ತಿಗಳು ನನ್ನ ತಂದೆ ತಾಯಿ ಮತ್ತು ನನ್ನ ಅಕ್ಕ ಆಗಿರುತ್ತಾರೆ. 2ನೇ ಛಾಯಚಿತ್ರದಲ್ಲಿ ನನ್ನ ತಂದೆ ತಾಯಿ ನಿಂತಿರುತ್ತಾರೆ. 2ನೇ ಛಾಯಚಿತ್ರದಲ್ಲಿ ಪಕ್ಕದಲ್ಲಿ ಕಾಣುತ್ತಿರುವುದು ನನ್ನ ಅಜ್ಜಿ ತಿಮ್ಮಕ್ಕ ಹಾಗೂ ಅವರ ಮಗ ರಾಜಪ್ಪನವರ ಮನೆ ಆಗಿರುತ್ತದೆ. ನಿಡಿ-22 ತರೀಕೆರೆಯ ನಾಗಪ್ಪ ಕಾಲೋನಿಯಲ್ಲಿರುವ ಸ್ವತ್ತಿನ ಬಗ್ಗೆ ಆಗಿರುತ್ತದೆ ಎಂದರೆ ಸರಿ. ಅದರಲ್ಲಿರುವ ಚಕ್ಕುಬಂದಿ ಯಾರ ಹೆಸರಿನಲ್ಲಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ಚಿಕ್ಕಪ್ಪ ಮತ್ತು ನನ್ನ ಅಜ್ಜಿ ಪಡೆದುಕೊಂಡಿರುವ ಸ್ವತ್ತಿನ ಬಗ್ಗೆ ಇ-ಸ್ವತ್ತು ಆಗಿರುವುದು ನನಗೆ ತಿಳಿದಿರುವುದಿಲ್ಲ. ನಿಡಿ-22 ಇ-ಸ್ವತ್ತನ್ನು ಪಡೆದುಕೊಳ್ಳಲು ಪಹಣಿಯನ್ನು ಹಾಜರುಪಡಿಸಿರುತ್ತೇವೆ ಯಾವುದೇ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ.

ದಿ: 08-05-2025 ರಂದು ಮತದಾರರ ಪಟ್ಟಿಯ ಗುರುತಿನ ಚೀಟಿ ಪ್ರಕಾರ ನಿಡಿ-22 ನ್ನು ಪಡೆದುಕೊಂಡಿರುತ್ತಿರಾ ಎಂದರೆ ಸರಿ. ಸದರಿ ದಾಖಲಾತಿಯಲ್ಲಿರುವ ಸ್ವತ್ತು ಅನಧೀಕೃತವಾಗಿರುತ್ತದೆ ಎಂದರೆ ಸರಿ. ನಿಡಿ-22 ಪ್ರಸ್ತುತ ಪ್ರಕರಣದ ದಾವ ಸ್ವತ್ತಿಗೆ ಸಂಬಂಧಪಟ್ಟ ದಾಖಲೆ ಅಗಿರುವುದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು ಸರ್ವೆ ನಂ.35/3 ರಲ್ಲಿ ಬರುತ್ತದೆ ಎಂದು ನುಡಿದಿರುತ್ತಾರೆ. ನೀವು ಮತ್ತು 2ನೇ ಪ್ರತಿವಾದಿಯಾದ ತಿಮ್ಮಕ್ಕ ಸ್ವಾಧೀನದಲ್ಲಿರುವ ಸ್ವತ್ತಿನ ಮನೆ ಸರ್ವೆ ನಂ.35/7 ರಲ್ಲಿಬರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.35/7 ವಾದಿಗೆ ಸೇರಿದ ಸ್ವತ್ತು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಡಿ-22 ರಿಂದ 26 ದಾಖಲಾತಿಗಳು ದಿ: 08-05-2025 ರ ನಂತರ ಪಡೆದುಕೊಂಡ ದಾಖಲಾತಿಗಳು ಎಂದರೆ ಸಾಕ್ಷಿ ಹೌದು ಎಂದು

ನುಡಿದಿರುತ್ತಾರೆ. ದಾವ ಆಸ್ತಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಸೃಷ್ಠಿ ಮಾಡಿಕೊಂಡಿರುತ್ತಿರಾ ಎಂದರೆ ಸರಿಯಲ್ಲ. ನಿಡಿ-27 ರಲ್ಲಿ ಕ್ರಮ ಸಂಖ್ಯೆ 16 ರಲ್ಲಿ ಆನಂದ ಕುಮಾರ್ ಬಿನ್ ನಾರಾಯಣಪ್ಪ ಎಂದು ನಮೂದು ಇದ್ದು, ಸದರಿ ಹೆಸರಿನಲ್ಲಿ ನಿಮ್ಮ ಕುಟುಂಬದಲ್ಲಿ ಯಾವುದೇ ವ್ಯಕ್ತಿ ಇಲ್ಲ ಎಂದರೆ ಸಾಕ್ಷಿ ಅದು ನನಗೆ ಸರಿಯಾಗಿ ಕಾಣಿಸುತ್ತಿಲ್ಲ ಎಂದು ನುಡಿದಿರುತ್ತಾರೆ. ನಿಡಿ-27 ರ ದಾಖಲಾತಿಯನ್ನು ನಮ್ಮ ಹಸೆರಿನಲ್ಲಿ ಸ್ವತ್ತು ಇದೆ ಎಂದು ತೋರಿಸಲು ಹಾಜರುಪಡಿಸಿರುತ್ತೇವೆ. ಸದರಿ ದಾಖಲಾತಿಯಲ್ಲಿ ನಾರಾಯಣ ಬಿನ್ ಖಂಡ್ಯಪ್ಪ ಮತ್ತು ತಿಮ್ಮಕ್ಕ ಕೋಂ ಖಂಡ್ಯಪ್ಪ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ನಾರಾಯಣ ಎಂಬ ಹೆಸರು ಮಾತ್ರ ಕಾಣಿಸುತ್ತಿದ್ದು, ಬೇರೆ ಏನೂ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರಿದು ನನಗೆ ಅದರಲ್ಲಿ ಕಾಣಿಸುತ್ತಿಲ್ಲ ಎಂದು ನುಡಿದಿರುತ್ತಾರೆ. ನೀವುವಾದಿಗೆ ಸೇರಬೇಕಾದಂತಹ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಮಾಹಿತಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**